ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಾಲಿ ಪಶುವೈದ್ಯರ ಹುದ್ದೆಗಳು ಖಾಲಿ ಇರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಜಿ. ಎಸ್. ಆಚಾರ್.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೊಸ ಗ್ರಾಮೀಣ ಪಶುವೈದ್ಯಶಾಲೆಗಳನ್ನು ಸ್ಥಾಪಿಸಬೇಕೆಂದು ಜಿಲ್ಲಾಪರಿಷತ್ತಿನಿಂದ ಮನವಿ ಬಂದಿದೆ. ಪಶುವೈದ್ಯಶಾಲೆಗಳನ್ನು ಆರಂಭಿಸಲು ಬೇಕಾದ ಸಿಬ್ಬಂದಿ ನೇಮಿಸುವ ಪದ್ಧತಿ ಈಗ ಸರ್ಕಾರದಲ್ಲೇ ಇದೆ, ಇದರ ಜವಾಬ್ದಾರಿ ಜಿಲ್ಲಾಪರಿಷತ್ತಿನ ದಲ್ಲ. ಆದ್ದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಪಶುವೈದ್ಯಶಾಲೆಗಳನ್ನು ಆರಂಭಿಸಲು ಕ್ರಮ ಕೈಗೊಳ್ಳುತ್ತೀರಿ ? ಮಂಜೂರಾತಿ ತಮ್ಮಿಂದ ದೊರಕುತ್ತದೆಯೇ ? ಎಷ್ಟು ಗ್ರಾಂಟ್ ಇನ್ನು ಮುಂದೆ ಸಿಗುತ್ತದೆ ಎಂಬುದನ್ನು ತಾವು ತಿಳಿಸಬೇಕು, ಸುಮ್ಮನೆ ಜಿಲ್ಲಾಪರಿಷತ್ತಿನ ಮೇಲೆ ಗೂಬೆ ಕೂರಿಸುವ ಕೆಲಸ ಬೇಡ.

ಶ್ರೀ ಮಹಮದ್ ಮೊಯಿನುದ್ದೀನ್.—ಈಗಾಗಲೇ ನಾನು ಹೇಳಿದಂತೆ any opening of new dispensaries, entirely left to the Zilla Parishads. ಉತ್ತರ ಕನ್ನಡಕ್ಕೆ ೧ ಲಕ್ಷ ೧೦ ಸಾವಿರ ಬಿಡುಗಡೆ ಮಾಡಿದ್ದೇವೆ. ಹೊಸ ರೂರಲ್ ವೆಟರ್ನಿಟಿ ಹಾಸ್ಪಿಟಲ್‌ಗಾಗಿ ೮೮-೮೯ರ ಪ್ಲಾನ್‌ನಲ್ಲೂ ಸೇರಿಕೊಂಡಿಲ್ಲ ಮತ್ತು ಪ್ರೊಪೋಸಲ್ಸೂ ಜಿಲ್ಲಾಪರಿಷತ್‌ನಿಂದ ಸಹ ಸರ್ಕಾರಕ್ಕೆ ಬಂದಿಲ್ಲ.

ಹೊಸನಗರಕ್ಕೆ ವಿದ್ಯುಚ್ಚಕ್ತಿ ಸಬ್‌ಡಿವಿಜನ್ ಮಂಜೂರು ಮಾಡುವುದು

೮೮೧ (೫೬೯) ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಹೊಸನಗರಕ್ಕೆ ವಿದ್ಯುಚಕ್ತಿ ಸಬ್‌ಡಿವಿಜನ್ ಮಂಜೂರು ಮಾಡದಿರಲು ಕಾರಣವೇನು?

ಆ) ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಆ) ೧೯೮೮ರಲ್ಲಿ ಈ ವಿಷಯವನ್ನು ಪರಿಶೀಲಿಸಿ ಹೊಸ ನಗರದಲ್ಲಿ ಸಬ್‌ಡಿವಿಜನ್ ಸ್ಥಾಪಿಸಲು ಹಾಲಿ ಸಾಕಷ್ಟು ಗ್ರಾಹಕರ ಸಂಖ್ಯೆ (ವರ್ಕ್‌ಲೋಡು) ಇಲ್ಲದಿರುವುದರಿಂದ ಗ್ರಾಹಕರ ಸಂಖ್ಯೆ ಹೆಚ್ಚಾದ ನಂತರ ಮುಂದೆ ಪರಿಶೀಲಿಸಬಹುದೆಂದು ತೀರ್ಮಾನ ಕೈಗೊಳ್ಳಲಾಗಿತ್ತು.

ಆ) ರಾಜ್ಯದಲ್ಲಿ ವಿಭಾಗ, ಉಪವಿಭಾಗ, ಶಾಖೆಗಳ ಪುನರ್‌ರಚನೆಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಮಂಡಳಿಯ ಆರ್ಥಿಕ ಸ್ಥಿತಿ ಗಮನದಲ್ಲಿಟ್ಟುಕೊಂಡು ಕನಿಷ್ಟ ಅಗತ್ಯ ಪೂರೈಸಲು ಯತ್ನಿಸಲಾಗುತ್ತಿದೆ. ಆದ್ದರಿಂದ ಹೊಸನಗರದಲ್ಲಿ ಉಪವಿಭಾಗ ಸ್ಥಾಪಿಸುವುದನ್ನು ಸೂಕ್ತ ಸಮಯದಲ್ಲಿ ಕೈಗೊಳ್ಳಲಾಗುತ್ತದೆ.

ಶ್ರೀ ಬಿ. ಸ್ವಾಮಿರಾವ್.—ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ವರ್ಕ್ ಲೋಡ್ ಕಡಿಮೆ ಇದೆ ಆದಕ್ಕೋಸ್ಕರ ಸಬ್‌ಡಿವಿಷನ್‌ನ್ನು ಸ್ಥಾಪನೆ ಮಾಡಿಲ್ಲ ಎಂದು ಹೇಳಿದ್ದಾರೆ. ಮಾನ್ಯ ಮಂತ್ರಿಗಳು ನಮ್ಮ ಊರಿಗೆ ಬಂದಾಗ ಹೇಳಿದ್ದೇನೆ. ಅಲ್ಲಿ ವರ್ಕ್‌ಲೋಡ್ ಜಾಸ್ತಿಯಾಗಿರುವುದರಿಂದ ಪಕ್ಕದಲ್ಲಿರುವ ತೀರ್ಥಹಳ್ಳಿಗೆ ವರ್ಕ್‌ಲೋಡ್ ಕೊಟ್ಟಿದ್ದಾರೆ, ಅಲ್ಲಿ ಚಕ್ರಾ ವರಾಹಿ ಮುಂತಾದ ಯೋಜನೆಗಳೆಲ್ಲಾ ಅಲ್ಲಿ ಬಂದಿದ್ದು ಆ ಯೋಜನೆಯಲ್ಲಿ ಬರತಕ್ಕಂತಹ ಎಲ್ಲಾ ಕೆಲಸಗಳನ್ನು ವರ್ಕ್‌ಲೋಡ್‌ಅನ್ನು ತೀರ್ಥಹಳ್ಳಿ ಸಬ್ ಡಿವಿಜನ್ ಮರ್ಜ್ ಮಾಡಿದ್ದಾರೆ. ಹೊಸನಗರ ತಾಲ್ಲೂಕಿನಲ್ಲಿ ಮಾಡಬೇಕೆಂದು ಹೇಳಿದ್ದಾರೆ, ಇಲ್ಲಿ ಕೊಟ್ಟಿರುವ ಮಾಹಿತಿ ಸರಿಯಿಲ್ಲ. ಹೊಸನಗರ ತಾಲ್ಲೂಕು ೧೫೦ ಕಿಲೋ ಮೀಟರ್ ವಿಸ್ತೀರ್ಣ ಇದ್ದು, ಅಲ್ಲಿ ಅಲ್ಲಿ ಚಕ್ರಾ, ವರಾಹಿ, ಸಾವೇಹಕ್ಕಲು, ಲಿಂಗನಮಕ್ಕಿ ಡ್ಯಾಂ—ಎಲ್ಲಾ ಯೋಜನೆಗಳು ಅಲ್ಲಿ ನಡೆಯುತ್ತಿರುವುದರಿಂದ ಇಡೀ ರಾಜ್ಯಕ್ಕೆ ಬೆಳಕು ಕೊಡತಕ್ಕಂತಹ ಸ್ಥಳದಲ್ಲಿ ಸಬ್ ಡಿವಿಜನ್ ಮಾಡಲು ಸೂಕ್ತ ಸಮಯದಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳುವುದರಲ್ಲಿ ಅರ್ಥವಿಲ್ಲವೆಂಬುದು ನನ್ನ ಅಭಿಪ್ರಾಯ ; ಇದಕ್ಕೆ ಮಾನ್ಯ ಮಂತ್ರಿಗಳ ಉತ್ತರವೇನು ?

ಶ್ರೀ ಲಕ್ಷ್ಮೀನರಸಿಂಹಯ್ಯ.—೧೯೮೮ರಲ್ಲಿ ಸರ್ವೆ ಮಾಡಿದ್ದಾರೆ. ಅಲ್ಲಿ ಸಬ್ ಡಿವಿಜನ್ ಸ್ಥಾಪನೆ ಮಾಡಬೇಕಾದಂತಹ ಅಗತ್ಯ ಇದೆಯೋ ಇಲ್ಲವೋ ಎಂಬ ಬಗ್ಗೆ ಹೇಳಬೇಕೆಂದರೆ ಅಲ್ಲಿ ವರ್ಕ್‌ಲೋಡ್ ಕಮ್ಮಿ ಇದೆಯೆಂದು ಇದನ್ನು ಮಾಡುವ ಅವಶ್ಯಕತೆ ಇಲ್ಲವೆಂದು ಕೈ ಬಿಟ್ಟಿದ್ದಾರೆ ಈ ಮಧ್ಯೆ ಚಕ್ರಾ

ಮತ್ತು ಬೇರೆ ಬೇರೆ ಯೋಜನೆಗಳು ಬಂದಿದ್ದಂತಹ ಸಂದರ್ಭದಲ್ಲಿ ಕೆಲಸ ನಡೆಯುತ್ತಿಲ್ಲದಂತಹ ಸಂದರ್ಭದಲ್ಲಿ ತಾತ್ಕಾಲಿಕವಾಗಿ ಅತಿ ಹೆಚ್ಚಿನ ಲೋಡ್ ಬಂದಿದೆ. ಈಗ ಕೆಲಸವೆಲ್ಲಾ ಮುಗಿದಿರುವುದರಿಂದ ಬಹಳ ಕಡಿಮೆಯಾಗಿದೆ. ಅವರೇ ಹೇಳಿದ ಪ್ರಕಾರ ೧೫೦ ಕಿಲೋ ಮೀಟರ್ ದೂರದಿಂದ ತೀರ್ಥಹಳ್ಳಿಗಾಗಲೀ, ಸಾಗರಕ್ಕಾಗಲೀ ಹೋಗಬೇಕಾಗುತ್ತದೆ. ತಾವು ಅತ್ಯವಶ್ಯಕವಾಗಿ ಅಲ್ಲಿಗೆ ಸಬ್ ಡಿವಿಜನ್ ಬೇಕು ಅನ್ನುತ್ತಿದ್ದಂತಹ ಬೇಡಿಕೆ ಏನು ಇಟ್ಟಿದ್ದೀರಿ ಅದು ನ್ಯಾಯವಾಗಿದೆ. ಇದನ್ನು ಪರಿಶೀಲನೆ ಮಾಡಿ ವಿಶೇಷ ಸಂದರ್ಭದಲ್ಲಿ ಈ ಡಿಸ್ಪೆನ್ಸ್‌ನಿಂದ ಹೋಗಿ ಆ ಸಬ್ ಡಿವಿಜನ್‌ನಲ್ಲಿ ಕೆಲಸ ಮಾಡಿಸಿಕೊಳ್ಳುವುದು ಕಷ್ಟವೆನ್ನುವ ಒಂದು ದೃಷ್ಟಿಯಿಂದ ಇದನ್ನು ಪರಿಗಣಿಸಬೇಕಾಗಿದೆ. ಇಡೀ ರಾಜ್ಯಕ್ಕೆ ಬೆಳಕು ಕೊಡುತ್ತಿರುವವರಿಗೇ ತೊಂದರೆ ಇದೆ ಎಂದು ಏನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ ಅದನ್ನು ಪರಿಗಣನೆಗೆ ತೆಗೆದುಕೊಂಡು ಬೇಗ ಇದನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

Selection of the Places for Tea Plantation in Kodagu

882 (2141) SMT SUMA VASANTH (Virajpet).—Will the Minister for Forest be Pleased to State:—

1. Which are the places selected for Tea Plantation in Kodagu ?

2, What is the total area reserved for the said plantation and the expenditure incurred ?

3. Whether there are any instance of Tea Plantations being raised in any part of Virajpet Taluk ?

SRI G. S. BAGALKOT (Minister for Forest).—

1. Galeebeedu in Madikeri Taluk has been selected for raising Tea Plantation in Kodagu District.

2. The total area reserved is 800 hec. The amount spent so far is Rs. 101.44 lakhs.

3. This has been tried near Srimangala.

ಶ್ರೀ ಬಿ. ಲಕ್ಕಪ್ಪ (ಶ್ರೀಮತಿ ಸುಮಾ ವಸಂತರ ಪರವಾಗಿ).—ಮಡಿಕೇರಿ ಹತ್ತಿರ ಗಾಳೀಬೀಡು ಎಂಬಲ್ಲಿ ಟೀ ಪ್ಲಾಂಟೇಷನ್‌ಗೆ ೮೦೦ ಎಕರೆಗಳನ್ನು ತೆಗೆದುಕೊಂಡಿದ್ದು ೧೦೧.೪೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ ಎಂದು ಹೇಳಿದ್ದಾರೆ. ಇದನ್ನು ಯಾರು ನಿರ್ವಹಿಸುತ್ತಿದ್ದಾರೆ ?

ಶ್ರೀ ಜಿ. ಎಸ್. ಬಾಗಲಕೋಟೆ.—ಈ ಯೋಜನೆಯನ್ನು ನಾವು ಈಗ ಪ್ರಾರಂಭಿಕವಾಗಿ ಕೈಗೊಂಡಿದ್ದೇವೆ. ಕರ್ನಾಟಕ ಅಭಿವೃದ್ಧಿ ನಿಗಮಕ್ಕೆ ಇದನ್ನು ಪ್ರಾರಂಭಿಕವಾಗಿ ವಹಿಸಲಾಗಿದೆ,

ಶ್ರೀ ಬಿ. ಲಕ್ಕಪ್ಪ.—ವೀರಾಜಪೇಟೆ ತಾಲ್ಲೂಕಿನ ಹತ್ತಿರ ಸಿರಿಮಂಗಳ ಎನ್ನುತಕ್ಕಂತಹ ಅರಣ್ಯ ಪ್ರದೇಶವನ್ನು ಆಯ್ಕೆ ಮಾಡಿಕೊಂಡಿದ್ದು ಸಾಕಷ್ಟು ಹಣವನ್ನು ಖರ್ಚುಮಾಡಿ ಪ್ಲಾಂಟೇಷನ್ ಮಾಡಿದ್ದು ಅದನ್ನು ಹಾಳುಬಿಟ್ಟಿರುತಕ್ಕಂಥಾದ್ದು ಇದೆ. ಇದನ್ನು ಏತಕ್ಕಾಗಿ ಹಾಳು ಬಿಡಲಾಗಿದೆ ? ಸರಕಾರಕ್ಕೆ ಇದರಿಂದ ಎಷ್ಟು ನಷ್ಟವಾಗಿದೆ.

ಶ್ರೀ ಜಿ. ಎಸ್. ಬಾಗಲಕೋಟೆ.—ಸಿರಿಮಂಗಳದ ಹತ್ತಿರ ಟೀ ಪ್ಲಾಂಟೇಷನ್ ಮಾಡಿದ್ದು ೧೦ ಹೆಕ್ಟೇರ್ ಮಾತ್ರ ಅದನ್ನು ಪ್ರಾಯೋಗಿಕವಾಗಿ ಮಾಡಲಾಗಿತ್ತು. ಅಲ್ಲಿ ಮರಗಳನ್ನು ಕಡಿದು ಈ ಯೋಜನೆಯನ್ನು ಕೈಗೊಳ್ಳಬೇಕಾದ ಪ್ರಸಂಗ ಇತ್ತು. ಮುಂದೆ ಕೆಲವು ದಿವಸಗಳಲ್ಲಿ ಗುಡ್ಡೂರು ಬಳಿ ಅರಣ್ಯವಿಲ್ಲದಂತಹ ಪ್ರದೇಶಗಳಲ್ಲಿ ಈ ಟೀ ಪ್ರಾಜೆಕ್ಟ್ ಅನ್ನು ತೆಗೆದುಕೊಳ್ಳಬೇಕೆಂದು ಇದ್ದೇವೆ. ಪ್ರಾಯೋಗಿಕವಾಗಿ ಒಳ್ಳೆಯ ರೀತಿಯಿಂದ ಈ ಗುಡ್ಡೂರ್ ಬಳಿ ಈ ಪ್ರಾಜೆಕ್ಟ್ ಅನ್ನು ಕೈಗೊಳ್ಳಬೇಕೆಂದು ಸರ್ಕಾರ ವಿಚಾರ ಮಾಡುತ್ತಿದೆ.